## “ಆತ್ಮಿಕ ಘನತೆಯಿಂದ ಕೂಡಿದ ಆತ್ಮರ ಚಿಹ್ನೆಗಳು”

ಇಂದು ಬಾಪ್ದಾದಾ ನಾಲ್ಕಾರುಕಡೆಯ ತನ್ನ ಆತ್ಮಿಕ ರಾಯಲ್ ಪರಿವಾರವನ್ನು ನೋಡುತ್ತಿದ್ದಾರೆ. ಇಡೀ ಕಲ್ಪದಲ್ಲಿ ತಾವಾತ್ಮರೇ ಎಲ್ಲರಿಗಿಂತ ರಾಯಲ್ ಆಗಿದ್ದೀರಿ. ಹಾಗೆ ನೋಡಿದ್ದರೆ ಹದ್ದಿನ ರಾಜ್ಯಾಧಿಕಾರಿ, ರಾಯಲ್ ಪರಿವಾರದವರ ಗಾಯನವು ಬಹಳಷ್ಟಿದೆ ಆದರೆ ಆತ್ಮಿಕ ರಾಯಲ್ ಪರಿವಾರದವರು ಕೇವಲ ತಾವೇ ಗಾಯನಗೊಂಡಿದ್ದೀರಿ. ತಾವು ರಾಯಲ್ ಪರಿವಾರದ ಆತ್ಮರು ಆದಿಕಾಲದಲ್ಲಿ ಹಾಗೂ ಅನಾದಿಕಾಲದಲ್ಲಿಯೂ ಮತ್ತು ವರ್ತಮಾನ ಸಂಗಮಯುಗದಲ್ಲಿಯೂ ಆತ್ಮಿಕ ರಾಯಲ್ಟಿಯವರಾಗಿದ್ದೀರಿ. ಅನಾದಿಕಾಲ ಮಧುರ ಮನೆಯಲ್ಲಿಯೂ ತಾವು ವಿಶೇಷ ಆತ್ಮರ ಆತ್ಮೀಯತೆಯ ಹೊಳಪು ಮತ್ತು ಕಾಂತಿ ಸರ್ವಆತ್ಮರಿಗಿಂತಲೂ ಶ್ರೇಷ್ಠವಾಗಿದೆ. ಎಲ್ಲಾ ಆತ್ಮರು ಹೊಳೆಯುತ್ತಿರುವ ಜ್ಯೋತಿ ಸ್ವರೂಪರಾಗಿದ್ದಾರೆ. ಆದರೂ ತಮ್ಮ ಆತ್ಮಿಕ ಘನತೆಯ ಹೊಳಪು ಅಲೌಕಿಕವಾಗಿದೆ. ಹೇಗೆ ಸಾಕಾರಿಪ್ರಪಂಚದಲ್ಲಿ ಆಕಾಶದ ಮಧ್ಯದಲ್ಲಿ ನಕ್ಷತ್ರಗಳೆಲ್ಲವೂ ಹೊಳೆಯುತ್ತಿರುವಂತೆ ಕಾಣಿಸುತ್ತವೆ ಆದರೆ ಕೆಲವು ವಿಶೇಷವಾಗಿ ಹೊಳೆಯುವ ನಕ್ಷತ್ರಗಳು ಸ್ವತಹವಾಗಿಯೇ ತನ್ನಕಡೆ ಆಕರ್ಷಿಸುತ್ತವೆ. ಪ್ರಕಾಶತೆಯಿದ್ದರೂ ಸಹ ಅವುಗಳ ಪ್ರಕಾಶತೆಯು ವಿಶೇಷವಾಗಿ ಕಾಣಿಸುತ್ತದೆ. ಹಾಗೆಯೇ ಅನಾದಿಕಾಲ ಪರಮಧಾಮದಲ್ಲಿಯೂ ತಾವು ಆತ್ಮಿಕ ನಕ್ಷತ್ರಗಳ ಹೊಳಪು ಅರ್ಥಾತ್ ಆತ್ಮಿಕ ಘನತೆಯ ಹೊಳಪು ವಿಶೇಷ ಅನುಭವವಾಗುತ್ತದೆ. ಅದೇ ಪ್ರಕಾರವಾಗಿ ಆದಿಕಾಲ ಸತ್ಯಯುಗ ಅರ್ಥಾತ್ ಸ್ವರ್ಗದಲ್ಲಿ ತಾವಾತ್ಮರು ವಿಶ್ವಮಹಾರಾಜನ ರಾಯಲ್ ಪರಿವಾರದ ಅಧಿಕಾರಿಗಳಾಗಿದ್ದೀರಿ. ಪ್ರತಿಯೊಬ್ಬ ರಾಜನಿಗೆ ರಾಯಲ್ ಪರಿವಾರವಿರುತ್ತದೆ.

ಆದರೆ ತಾವಾತ್ಮರ ರಾಯಲ್ ಪರಿವಾರದ ರಾಯಲ್ಟಿ ಹಾಗೂ ದೇವಾತ್ಮರ ರಾಯಲ್ಟಿಯು ಇಡೀ ಕಲ್ಪದಲ್ಲಿ ಮತ್ತ್ಯಾವುದೇ ರಾಯಲ್ ಪರಿವಾರದವರಿಗೆ ಇರಲು ಸಾಧ್ಯವಿಲ್ಲ. ಇಷ್ಟು ಶ್ರೇಷ್ಠ ರಾಯಲ್ಟಿಯನ್ನು ಚೈತನ್ಯ ಸ್ವರೂಪದಲ್ಲಿ ಪ್ರಾಪ್ತಿ ಮಾಡಿಕೊಂಡಿದ್ದೀರಿ. ಯಾವುದರಿಂದ ತಮ್ಮ ಜಡಚಿತ್ರಗಳಿಗೂ ಸಹ ಎಷ್ಟು ಘನತೆಯಿಂದ ಪೂಜೆಯು ನಡೆಯುತ್ತದೆ. ಇಡೀ ಕಲ್ಪದಲ್ಲಿ ರಾಯಲ್ಟಿಯ ವಿಧಿಯ ಪ್ರಮಾಣ ಮತ್ತ್ಯಾವುದೇ ಧರ್ಮಪಿತ, ಧರ್ಮಾತ್ಮ ಅಥವಾ ಮಹಾತ್ಮರಿಗೂ ಸಹ ಈ ರೀತಿ ಪೂಜೆಯು ನಡೆಯುವುದಿಲ್ಲ ಅಂದಮೇಲೆ ಆಲೋಚಿಸಿ- ಯಾವಾಗ ಜಡಚಿತ್ರಗಳಲ್ಲಿಯೂ ಸಹ ರಾಯಲ್ಟಿಯಿಂದ ಪೂಜೆಯಾಗುತ್ತಿದೆ ಅಂದಮೇಲೆ ಚೈತನ್ಯದಲ್ಲಿ ಇನ್ನೆಷ್ಟು ರಾಯಲ್ ಪರಿವಾರದವರಾಗುತ್ತೀರಿ! ಅಂದಾಗ ಇಷ್ಟು ರಾಯಲ್ ಆಗಿದ್ದೀರಾ? ಅಥವಾ ಆಗುತ್ತಿದ್ದೀರಾ? ಈಗ ಸಂಗಮದಲ್ಲಿಯೂ ಸಹ ಆತ್ಮಿಕ ರಾಯಲ್ಟಿ ಅರ್ಥಾತ್ ಫರಿಶ್ತಾ ಸ್ವರೂಪರಾಗುತ್ತೀರಿ, ಆತ್ಮಿಕ ತಂದೆಯ ಆತ್ಮಿಕ ರಾಯಲ್ ಪರಿವಾರದವರಾಗುತ್ತೀರಿ. ಅನಾದಿಕಾಲ, ಆದಿಕಾಲ ಮತ್ತು ಸಂಗಮಯುಗಿಕಾಲ, ಮೂರೂಕಾಲಗಳಲ್ಲಿ ನಂಬರ್ವನ್ ರಾಯಲ್ ಆಗುತ್ತೀರಿ ಅಂದಮೇಲೆ ನಾವು ಮೂರೂಕಾಲಗಳಲ್ಲಿಯೂ ಆತ್ಮಿಕ ರಾಯಲ್ಟಿಯ ಆತ್ಮರಾಗಿದ್ದೇವೆ ಎಂಬ ನಶೆಯಿರುತ್ತದೆಯೇ?

ಈ ಆತ್ಮಿಕ ರಾಯಲ್ಟಿಯ ತಳಹದಿಯು ಯಾವುದಾಗಿದೆ? ಸಂಪೂರ್ಣ ಪವಿತ್ರತೆ. ಸಂಪೂರ್ಣ ಪವಿತ್ರತೆಯೇ ಘನತೆಯಾಗಿದೆ. ಅಂದಮೇಲೆ ತಮ್ಮೊಂದಿಗೆ ಕೇಳಿಕೊಳ್ಳಿ- “ಆತ್ಮಿಕ ಘನತೆಯ ಹೊಳಪು ತಮ್ಮ ರೂಪದಿಂದ ಎಲ್ಲರಿಗೂ ಅನುಭವವಾಗುತ್ತದೆಯೇ? ಆತ್ಮಿಕ ಘನತೆಯ ನಶೆಯು ಪ್ರತೀ ಚರಿತ್ರೆಯಿಂದ (ಪ್ರತೀ ಕರ್ಮ) ಅನುಭವವಾಗುತ್ತದೆಯೇ?” ಲೌಕಿಕ ಪ್ರಪಂಚದಲ್ಲಿಯೂ ಅಲ್ಪಕಾಲದ ರಾಯಲ್ಟಿಯು ತಿಳಿಯದಿದ್ದರೂ ಸಹ ಚಹರೆಯಿಂದ, ಚಲನೆಯಿಂದ ಅನುಭವವಾಗುತ್ತದೆ ಅಂದಮೇಲೆ ಆತ್ಮಿಕ ರಾಯಲ್ಟಿಯು ಗುಪ್ತವಾಗಿರಲು ಸಾಧ್ಯವಿಲ್ಲ. ಅದೂ ಸಹ ಸಹಜವಾಗಿ ಕಂಡುಬರುತ್ತದೆ ಅಂದಮೇಲೆ ಪ್ರತಿಯೊಬ್ಬರೂ ಜ್ಞಾನದ ದರ್ಪಣದಲ್ಲಿ ತಮ್ಮನ್ನು ನೋಡಿಕೊಳ್ಳಿರಿ- ನನ್ನ ಚಹರೆಯಲ್ಲಿ, ಚಲನೆಯಲ್ಲಿ ರಾಯಲ್ಟಿಯು ಕಂಡುಬರುತ್ತದೆಯೇ? ಅಥವಾ ಸಾಧಾರಣ ಚಹರೆ, ಸಾಧಾರಣ ಚಲನೆಯು ಕಂಡುಬರುತ್ತದೆಯೇ? ಹೇಗೆ ಸತ್ಯವಜ್ರವು ತನ್ನ ಹೊಳಪಿನಿಂದ ಎಲ್ಲಿಯೂ ಮುಚ್ಚಿಡಲ್ಪಡಲು ಸಾಧ್ಯವಿಲ್ಲ ಹಾಗೆಯೇ ಆತ್ಮಿಕ ಹೊಳಪುಳ್ಳವರು ಆತ್ಮಿಕ ಘನತೆಯುಳ್ಳವರು ಗುಪ್ತವಾಗಿರಲು ಸಾಧ್ಯವಿಲ್ಲ.

ಕೆಲವು ಮಕ್ಕಳು ತನ್ನನ್ನು ಖುಷಿಪಡಿಸಿಕೊಳ್ಳಲು ಆಲೋಚಿಸುತ್ತಾರೆ ಮತ್ತು ಈ ರೀತಿ ಹೇಳುತ್ತಾರೆ- “ನಾವು ಗುಪ್ತ ಆತ್ಮರಾಗಿದ್ದೇವೆ ಆದ್ದರಿಂದ ನಮ್ಮನ್ನು ಯಾರೂ ಗುರುತಿಸುವುದಿಲ್ಲ. ಸಮಯವು ಬಂದಾಗ ತಾನಾಗಿಯೇ ಅರ್ಥವಾಗಿಬಿಡುವುದು”ಗುಪ್ತ ಪುರುಷಾರ್ಥವು ಒಳ್ಳೆಯ ಮಾತೇ ಆಗಿದೆ ಆದರೆ ಗುಪ್ತ ಪುರುಷಾರ್ಥಿಯ ಹೊಳಪು ಮತ್ತು ನಶೆ ಹಾಗೂ ಆತ್ಮಿಕ ರಾಯಲ್ಟಿಯ ಕಾಂತಿಯು ಅನ್ಯರಿಗೆ ಅವಶ್ಯವಾಗಿ ಅನುಭವ ಮಾಡಿಸುವುದು. ತನ್ನನ್ನು ತಾನು ಭಲೆ ಎಷ್ಟಾದರೂ ಗುಪ್ತವಾಗಿ ಇಟ್ಟುಕೊಳ್ಳಬಹುದು ಆದರೆ ಅವರ ಮಾತು, ಅವರ ಸಂಬಂಧ-ಸಂಪರ್ಕ, ಆತ್ಮಿಕ ವ್ಯವಹಾರದ ಪ್ರಭಾವವು ಅವರನ್ನು ಪ್ರತ್ಯಕ್ಷಗೊಳಿಸುತ್ತದೆ. ಯಾವುದನ್ನು ಸಾಧಾರಣ ಶಬ್ದಗಳಲ್ಲಿ ಪ್ರಪಂಚದವರು ಮಾತು ಹಾಗೂ ನಡವಳಿಕೆಯೆಂದು ಹೇಳುತ್ತಾರೆ. ಅಂದಾಗ ತನ್ನನ್ನು ತಾನು ಪ್ರತ್ಯಕ್ಷಗೊಳಿಸಿಕೊಳ್ಳುವುದಿಲ್ಲ ಗುಪ್ತವಾಗಿಟ್ಟುಕೊಳ್ಳುತ್ತಾರೆ, ಇದು ನಿರ್ಮಾಣತೆಯ ವಿಶೇಷತೆಯಾಗಿದೆ ಆದರೆ ಅನ್ಯರು ಅವರ ಚಲನೆ-ವಲನೆಯಿಂದ ಅವಶ್ಯವಾಗಿ ಅನುಭವ ಮಾಡುತ್ತಾರೆ. ಅಂದಮೇಲೆ ಇವರು ಗುಪ್ತ ಪುರುಷಾರ್ಥಿಯಾಗಿದ್ದಾರೆಂದು

ಅನ್ಯರು ಹೇಳುವಂತಿರಲಿ. ಒಂದುವೇಳೆ ನಾನು ಗುಪ್ತ ಪುರುಷಾರ್ಥಿಯಾಗಿದ್ದೇನೆಂದು ಸ್ವಯಂ ಹೇಳಿಕೊಂಡರೆ ಇದು ಗುಪ್ತವಾಗಿ ಇಟ್ಟುಕೊಂಡಂತಾಯಿತೇ ಅಥವಾ ಪ್ರತ್ಯಕ್ಷ ಮಾಡಿದಂತಾಯಿತೇ? ಗುಪ್ತ ಎಂದು ಹೇಳುತ್ತಿದ್ದೀರಿ ಆದರೆ ನಾನು ಗುಪ್ತ ಪುರುಷಾರ್ಥಿಯಾಗಿದ್ದೇನೆ ಎಂದು ತಮ್ಮ ಬಾಯಿಂದಲೇ ಹೇಳಿಕೊಳ್ಳುತ್ತಿದ್ದೀರೆಂದರೆ ಇದು ಗುಪ್ತವಾಯಿತೇ? ಅನೇಕರು ಪತ್ರದಲ್ಲಿಯೂ ಸಹ ಬರೆಯುತ್ತಾರೆ- ನಾವು ಗುಪ್ತ ಪುರುಷಾರ್ಥಿಗಳನ್ನು ನಿಮಿತ್ತರಾಗಿರುವ ದಾದಿಯರು ಅರಿತುಕೊಂಡಿಲ್ಲ. ಮತ್ತೆ ಇದನ್ನೂ ಸಹ ಬರೆಯುತ್ತಾರೆ, ಬೇಕೆಂದರೆ ಮುಂದೆ ನೋಡಿರಿ, ನಾವು ಏನು ಮಾಡುತ್ತೇವೆ, ಏನಾಗುತ್ತೇವೆ ಎಂದು. ಇದು ಗುಪ್ತ ಇದ್ದಂತಾಯಿತೇ ಅಥವಾ ಪ್ರತ್ಯಕ್ಷ ಮಾಡಿಕೊಂಡಂತಾಯಿತೇ? ಗುಪ್ತ ಪುರುಷಾರ್ಥಿಗಳು ತನ್ನನ್ನು ಗುಪ್ತವಾಗಿಟ್ಟುಕೊಳ್ಳುವುದು ಬಹಳ ಒಳ್ಳೆಯದೇ ಆಗಿದೆ ಆದರೆ ವರ್ಣನೆ ಮಾಡಬೇಡಿರಿ. ಅನ್ಯರು ತಮ್ಮನ್ನು ಗುಪ್ತಪುರುಷಾರ್ಥಿಗಳೆಂದು ಹೇಳುವಂತಿರಲಿ. ಯಾರು ತಮಗೆ ತಾವೇ ಹೇಳಿಕೊಳ್ಳುವರೋ ಅವರಿಗೆ ಏನು ಹೇಳಲಾಗುತ್ತದೆ? (ನಾನೇ ಎಲ್ಲವನ್ನು ಬಲ್ಲವನು) ಅಂದಮೇಲೆ ತನ್ನನ್ನು ಎಲ್ಲ ಬಲ್ಲವನೆಂದು ತಿಳಿದುಕೊಳ್ಳುವುದು ಬಹಳ ಸಹಜವಲ್ಲವೆ! ಅಂದಾಗ ಏನು ಕೇಳಿದಿರಿ? ಆತ್ಮಿಕ ರಾಯಲ್ಟಿ.

ರಾಯಲ್ ಆತ್ಮರು ಸದಾ ಒಂದನೆಯದಾಗಿ ಸಂಪನ್ನರಾಗಿರುತ್ತಾರೆ ಮತ್ತು ಸಂಪನ್ನತೆಯ ಚಿಹ್ನೆಯೇನೆಂದರೆ ಅವರು ಸದಾ ತೃಪ್ತ ಆತ್ಮರಾಗಿರುತ್ತಾರೆ. ತೃಪ್ತ ಆತ್ಮನು ಪ್ರತೀ ಪರಿಸ್ಥಿತಿಯಲ್ಲಿ ಪ್ರತೀ ಆತ್ಮನ ಸಂಬಂಧ-ಸಂಪರ್ಕದಲ್ಲಿ ಬಂದರೂ, ಎಲ್ಲಾ ತಿಳಿದುಕೊಂಡಿದ್ದರೂ ಸಂತುಷ್ಟವಾಗಿರುತ್ತಾರೆ. ಭಲೆ ಯಾರು ಎಷ್ಟಾದರೂ ಅಸಂತುಷ್ಟಪಡಿಸುವ ಪರಿಸ್ಥಿತಿಗಳನ್ನು ಅವರ ಮುಂದೆ ತರಲಿ ಆದರೆ ಸಂಪನ್ನ ತೃಪ್ತ ಆತ್ಮರು, ಅಸಂತುಷ್ಟಪಡಿಸುವವರನ್ನೂ ಸಹ ಸಂತುಷ್ಟತೆಯ ಗುಣವನ್ನು ಸಹಯೋಗದ ರೂಪದಲ್ಲಿ ಕೊಡುವರು. ಇಂತಹ ಆತ್ಮನಪ್ರತಿ ದಯಾಹೃದಯಿಯಾಗಿ ಶುಭಭಾವನೆ-ಶುಭಕಾಮನೆಯ ಮೂಲಕ ಅವರನ್ನೂ ಪರಿವರ್ತನೆ ಮಾಡುವ ಪ್ರಯತ್ನಪಡುತ್ತಾರೆ. ಆತ್ಮಿಕ ರಾಯಲ್ ಆತ್ಮರದು ಇದೇ ಶ್ರೇಷ್ಠಕರ್ಮವಾಗಿದೆ. ಹೇಗೆ ಸ್ಥೂಲ ರಾಯಲ್ ಆತ್ಮರು ಎಂದೂ ಚಿಕ್ಕ-ಚಿಕ್ಕ ಮಾತುಗಳಲ್ಲಿ, ಚಿಕ್ಕಪುಟ್ಟ ವಸ್ತುಗಳಲ್ಲಿ ತಮ್ಮ ಬುದ್ಧಿ ಹಾಗೂ ಸಮಯವನ್ನು ತೊಡಗಿಸುವುದಿಲ್ಲ. ನೋಡಿಯೂ ನೋಡದಂತೆ, ಕೇಳಿಯೂ ಕೇಳದಂತಿರುತ್ತಾರೆ. ಹಾಗೆಯೇ ಆತ್ಮಿಕ ರಾಯಲ್ ಆತ್ಮರು ಯಾವುದೇ ಆತ್ಮನ ಚಿಕ್ಕ-ಚಿಕ್ಕ ಮಾತುಗಳಲ್ಲಿ ಯಾವುದು ರಾಯಲ್ ಅಲ್ಲವೋ ಅದರಲ್ಲಿ ತನ್ನ ಬುದ್ಧಿ ಹಾಗೂ ಸಮಯವನ್ನು ತೊಡಗಿಸುವುದಿಲ್ಲ. ಪ್ರಪಂಚದವರು ಹೇಳುತ್ತಾರೆ- ರಾಯಲ್ಟಿ ಎಂದರೆ ಯಾವುದೇ ಚಿಕ್ಕಮಾತಿನಲ್ಲಿ ದೃಷ್ಟಿಹೋಗುವುದಿಲ್ಲ ಎಂದು. ಆತ್ಮಿಕ ರಾಯಲ್ ಆತ್ಮರ ಬಾಯಿಂದ ಎಂದೂ ವ್ಯರ್ಥ ಹಾಗೂ ಸಾಧಾರಣ ಮಾತು ಬರುವುದಿಲ್ಲ, ಪ್ರತೀ ಮಾತು ಯುಕ್ತಿಯುಕ್ತವಾಗಿರುವುದು. ಯುಕ್ತಿಯುಕ್ತ ಎಂಬುದರ ಅರ್ಥವೇನೆಂದರೆ ವ್ಯಕ್ತಭಾವದಿಂದ ದೂರ ಅವ್ಯಕ್ತಭಾವ, ಅವ್ಯಕ್ತಭಾವನೆ. ಇದಕ್ಕೆ ರಾಯಲ್ಟಿ ಎಂದು ಹೇಳಲಾಗುತ್ತದೆ. ಈ ಸಮಯದ ರಾಯಲ್ಟಿಯು ಭವಿಷ್ಯದ ರಾಯಲ್ ಪರಿವಾರದಲ್ಲಿ ಬರಲು ಅಧಿಕಾರಿಗಳನ್ನಾಗಿ ಮಾಡುತ್ತದೆ ಅಂದಾಗ ಪರಿಶೀಲನೆ ಮಾಡಿಕೊಳ್ಳಿರಿ- ವೃತ್ತಿಯು ರಾಯಲ್ ಆಗಿದೆಯೇ? ವೃತ್ತಿಯು ರಾಯಲ್ ಅರ್ಥಾತ್ "ಸದಾ ಶುಭಭಾವನೆ, ಶುಭಕಾಮನೆ"ಯ ವೃತ್ತಿಯಿಂದ ಪ್ರತಿಯೊಂದು ಆತ್ಮನೊಂದಿಗೆ ವ್ಯವಹಾರದಲ್ಲಿ ಬರುವುದು. ರಾಯಲ್ದೃಷ್ಟಿ ಅರ್ಥಾತ್ ಸದಾ ಫರಿಶ್ತಾ ರೂಪದಿಂದ ಅನ್ಯರನ್ನೂ ಫರಿಶ್ತಾ ರೂಪದಲ್ಲಿ ನೋಡುವುದು. ರಾಯಲ್ಕೃತಿ ಅರ್ಥಾತ್ ಕರ್ಮದಲ್ಲಿ ಸದಾ ಸುಖ ನೀಡುವುದು, ಸುಖ ಪಡೆಯುವುದು- ಈ ಶ್ರೇಷ್ಠಕರ್ಮದ ಪ್ರಮಾಣ ಸಂಪರ್ಕದಲ್ಲಿ ಬರುವುದು. ಇಷ್ಟು ರಾಯಲ್ ಆಗಿದ್ದೀರಾ? ಅಥವಾ ಆಗಬೇಕಾಗಿದೆಯೇ? ಬ್ರಹ್ಮಾತಂದೆಯ ಮಾತು, ಚಲನೆ, ಚಹರೆಯ ರಾಯಲ್ಟಿಯನ್ನು ನೋಡಿದಿರಿ. ಅದೇರೀತಿ ಬ್ರಹ್ಮಾತಂದೆಯನ್ನು ಫಾಲೋ ಮಾಡಿರಿ. ಸಾಕಾರತಂದೆಯನ್ನು ಫಾಲೋ ಮಾಡುವುದು ಸಹಜವಲ್ಲವೆ. ಬ್ರಹ್ಮನನ್ನು ಫಾಲೋ ಮಾಡಿದಿರೆಂದರೆ ಶಿವತಂದೆಯನ್ನು ಫಾಲೋ ಮಾಡಿದಂತೆಯೇ. ಒಬ್ಬರನ್ನಂತೂ ಫಾಲೋ ಮಾಡಬಹುದಲ್ಲವೆ. ತಂದೆಯ ಸಮಾನರಾಗುವ ಮಾತುಗಳನ್ನಂತೂ ನಿತ್ಯವೂ ಕೇಳುತ್ತೀರಿ! ಕೇಳುವುದು ಅರ್ಥಾತ್ ಫಾಲೋ ಮಾಡುವುದು. ಕಾಪಿ ಮಾಡುವುದು ಸಹಜವಾಗುತ್ತದೆಯಲ್ಲವೆ ಅಥವಾ ಕಾಪಿ ಮಾಡುವುದೂ ಸಹ ಬರುವುದಿಲ್ಲವೇ?

ಬಾಪ್ದಾದಾ ಇಂದು ಮುಗುಳ್ನಗುತ್ತಿದ್ದರು- ಮಧುಬನದಲ್ಲಿ ಬರುತ್ತೀರೆಂದರೆ ವಿಶೇಷವಾಗಿ ಗುರುವಾರದ ದಿನ ಏನು ಮಾಡುತ್ತಾರೆ? ಒಂದನೆಯದಾಗಿ ಭೋಗವನ್ನಿಡುತ್ತಾರೆ, ಮತ್ತೇನು ಮಾಡುತ್ತಾರೆ? ಯಾವುದನ್ನು ಕೇವಲ ಮಧುಬನದಲ್ಲಷ್ಟೇ ಮಾಡುತ್ತಾರೆ? ಮರುಜೀವ ಭೋಗವನ್ನಿಡುವುದು. ತಾವೆಲ್ಲರೂ ಮರುಜೀವಾ ಭೋಗವನ್ನು ಇಡಿಸಿದ್ದೀರಾ? ಬಾಪ್ದಾದಾ ಮುಗುಳ್ನಗುತ್ತಿದ್ದೆವು- 'ಮರುಜೀವಾ'ಎಂದು ಹೇಳಿ ಆಚರಿಸುವುದು ಸಹಜವಾಗಿದೆ. ಸ್ಟೇಜಿನ ಮೇಲೆ ಕುಳಿತುಬಿಟ್ಟಿರಿ, ತಿಲಕವನ್ನಿಡಿಸಿಕೊಂಡಿರಿ, ಮರುಜೀವಿಗಳಾಗಿಬಿಟ್ಟಿರಿ! ಆದರೆ ಜೀವಿಸಿದ್ದಂತೆಯೇ ಸಾಯುವುದು (ಮರುಜೀವಾ) ಎಂದರೆ ಹಳೆಯ ಸಂಸ್ಕಾರಗಳಿಂದ ಸಾಯುವುದು. ಹಳೆಯ ಸಂಸ್ಕಾರ, ಹಳೆಯ ಸಂಸಾರದಿಂದ ಸಾಯುವುದೇ ಜೀವಿಸಿದ್ದಂತೆಯೇ ಸಾಯುವುದಾಗಿದೆ. ಭೋಗವನ್ನಿಡಿಸಿದಿರಿ, ಭಂಡಾರದಲ್ಲಿ ಜಮಾ ಮಾಡಿದಿರಿ ಮತ್ತು ಮರುಜೀವಾ ಆಗಿಹೋಯಿತು, ಇದು ಸಹಜವಾದ ಮಾತಾಗಿದೆ ಆದರೆ ನಿಜವಾಗಿಯೂ ಸತ್ತುಬಿಟ್ಟಿರಾ? ಬಾಪ್ದಾದಾ ಆಲೋಚಿಸುತ್ತಿದ್ದೆವು- ಹಳೆಯ ಸಂಸಾರ ಮತ್ತು ಹಳೆಯ ಸಂಸ್ಕಾರದಿಂದ ಸದಾಕಾಲಕ್ಕಾಗಿ ಸಂಕಲ್ಪ ಹಾಗೂ ಸ್ವಪ್ನದಲ್ಲಿಯೂ ಸಾಯಬೇಕು. ಇಂತಹ ಮರುಜೀವಾ ದಿನವನ್ನು ಯಾರು ಮತ್ತು ಯಾವಾಗ ಆಚರಿಸುತ್ತೀರಿ? ಒಂದುವೇಳೆ ಸ್ಟೇಜಿನ ಮೇಲೆ ಕೂರಿಸಿದರೆ ಎಲ್ಲರೂ ಕುಳಿತುಬಿಡುತ್ತೀರಿ. ಸ್ಟೇಜಿನ ಮೇಲೆ ಕುಳಿತುಕೊಳ್ಳುವುದು ಸಾಮಾನ್ಯ ಮಾತಾಗಿದೆ ಆದರೆ ಆ ಸ್ಥಿತಿಯಲ್ಲಿ ಬುದ್ಧಿಯನ್ನು ಕೂರಿಸುವುದು- ಇದನ್ನೇ ಯಥಾರ್ಥವಾಗಿ ಮರುಜೀವಾ ಜನ್ಮವನ್ನು ಆಚರಿಸುವುದೆಂದು ಹೇಳಲಾಗುತ್ತದೆ. ಸತ್ತುಹೋಗುವುದೆಂದರೆ ಪರಿವರ್ತನೆಯಾಗುವುದು ಅಂದಮೇಲೆ ಈ ರೀತಿ ಮರುಜೀವಾ

ಆಗುವುದಕ್ಕಾಗಿ ಎಷ್ಟು ಜನ ತಯಾರಿದ್ದೀರಿ? ಅಥವಾ ಸೇವಾಕೇಂದ್ರಕ್ಕೆ ಹೋದಮೇಲೆ ಏನು ಮಾಡುವುದು? ಇಷ್ಟವಿರಲಿಲ್ಲ ಆದರೆ ಆಗಿಹೋಯಿತೆಂದು ಹೇಳುವಿರಾ? ಇಲ್ಲಂತೂ ಜೀವಿಸಿದ್ದಂತೆಯೇ ಸತ್ತು ಹೋಗುತ್ತೀರಿ, ಮತ್ತೆ ಹೋದಮೇಲೆ ಯಾವುದೇ ಮಾತು ಬಂದಾಗ ಮತ್ತೆ ಬದುಕಿ ಬರುತ್ತೀರಾ? ಈ ರೀತಿಯಾಗಬಾರದು.

ನೆನಪಾರ್ಥದಲ್ಲಿಯೂ ತೋರಿಸುತ್ತಾರೆ- ರಾವಣನ ಒಂದು ತಲೆಯು ಸಮಾಪ್ತಿಯಾದರೆ ಇನ್ನೊಂದು ಬಂದುಬಿಡುತ್ತಿತ್ತು ಎಂದು. ಹಾಗೆಯೇ ಇಲ್ಲಿಯೂ ಸಹ ಒಂದುಮಾತು ಪೂರ್ಣವಾದರೆ ಇನ್ನೊಂದು ಹುಟ್ಟಿಕೊಳ್ಳುತ್ತದೆ ನಂತರ ತಿಳಿದುಕೊಳ್ಳುತ್ತಾರೆ- ನಂತರ ರಾವಣನನ್ನು ಸಾಯಿಸಿದೆವು ಮತ್ತೆ ಇದೆಲ್ಲಿಂದ ಬಂದುಬಿಟ್ಟಿತು? ಆದರೆ ಮೂಲ ತಳಪಾಯವನ್ನು ಸಮಾಪ್ತಿ ಮಾಡದಿರುವ ಕಾರಣ ಒಂದುರೂಪವು ಬದಲಾಗಿ ಇನ್ನೊಂದು ರೂಪದಲ್ಲಿ ಬಂದುಬಿಡುತ್ತದೆ. ತಳಪಾಯವನ್ನು ಸಮಾಪ್ತಿ ಮಾಡಿಬಿಡಿ ಆಗ ರೂಪವು ಬದಲಾಗಿ ಮಾಯೆಯು ಯುದ್ಧ ಮಾಡುವುದಿಲ್ಲ. ಸದಾಕಾಲಕ್ಕಾಗಿ ವಿದಾಯಿ ತೆಗೆದುಕೊಂಡು ಹೋಗುವುದು. ಏನಾಗಬೇಕೆಂದು ತಿಳಿಯಿತೇ? ಆತ್ಮಿಕ ಘನತೆಯುಳ್ಳವರು ಆಗಬೇಕಾಗಿದೆ, ಸದಾ ಇದನ್ನು ಪರಿಶೀಲನೆ ಮಾಡಿಕೊಳ್ಳಿರಿ- ಪ್ರತೀ ಕರ್ಮವು ಆತ್ಮಿಕ ರಾಯಲ್ ಪರಿವಾರದವರಂತೆ ಇದೆಯೇ? ಯಾವಾಗ 99% ಮಾತು, ಕರ್ಮ ಹಾಗೂ ಸಂಕಲ್ಪ ರಾಯಲ್ಟಿಯಿಂದ ಕೂಡಿರುವುದೋ ಆಗ ತಿಳಿದುಕೊಳ್ಳಿರಿ- ಭವಿಷ್ಯದಲ್ಲಿಯೂ ರಾಯಲ್ ಪರಿವಾರದಲ್ಲಿ ಬರುತ್ತೀರಿ. ನಾವಂತೂ ಬಂದೇ ಬರುತ್ತೇವೆಂದು ಯೋಚಿಸಬೇಡಿ. ಹೋಗಲಿ, ಸಂಪನ್ನರಾಗದಿದ್ದರೆ 1% ಉಚಿತವಾಗಿ ಕೊಡುತ್ತೇವೆ ಆದರೆ 99% ರಾಯಲ್ಟಿಯ ಸಂಸ್ಕಾರ, ಮಾತು ಹಾಗೂ ಕರ್ಮವು ಸ್ವಾಭಾವಿಕವಾಗಬೇಕು. ಪದೇ-ಪದೇ ಯುದ್ಧ ಮಾಡುವಂತಾಗಬಾರದು. ಸ್ವಾಭಾವಿಕ ಸಂಸ್ಕಾರವಾಗಿಬಿಡಲಿ. ಒಳ್ಳೆಯದು.

ನಾಲ್ಕಾರುಕಡೆಯ ಆತ್ಮಿಕ ರಾಯಲ್ಟಿಯುಳ್ಳ ರಾಯಲ್ ಆತ್ಮರಿಗೆ, ಸದಾ ಪವಿತ್ರತೆಯ ಮೂಲಕ ಘನತೆಯ ಅನುಭವ ಮಾಡಿಸುವಂತಹ ಆತ್ಮರಿಗೆ, ಸದಾ ಫರಿಶ್ತಾ ಸ್ವರೂಪದ ಸಂಸ್ಕಾರವನ್ನು ಪ್ರತ್ಯಕ್ಷದಲ್ಲಿ ತರುವ ಆತ್ಮರಿಗೆ, ಸದಾ ಬ್ರಹ್ಮಾತಂದೆಯನ್ನು ಫಾಲೋ ಮಾಡುವಂತಹ ಆತ್ಮರಿಗೆ, ಸದಾ ಬ್ರಾಹ್ಮಣ ಸಂಸಾರದಲ್ಲಿ ಬ್ರಾಹ್ಮಣ ಸಂಸ್ಕಾರದ ಅನುಭವ ಮಾಡುವಂತಹ ಆತ್ಮಿಕ ರಾಯಲ್ ಪರಿವಾರದವರಿಗೆ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.

ಅವ್ಯಕ್ತ ಬಾಪ್ ದಾದಾರವರೊಂದಿಗೆ ಪರ್ಸನಲ್ ಭೇಟಿ

“ಸೇವೆಯಲ್ಲಿ ಬಿಜಿಯಾಗಿರಿ ಆಗ ಸಹಜ ಮಾಯಾಜೀತರಾಗಿ ಬಿಡುವಿರಿ”

ಸದಾ ತಮ್ಮ ಶಕ್ತಿಶಾಲಿ ವೃತ್ತಿಯಿಂದ ವಾಯುಮಂಡಲವನ್ನು ಪರಿವರ್ತನೆ ಮಾಡುವಂತಹ ವಿಶ್ವ ಪರಿವರ್ತಕ ಆತ್ಮಗಳಾಗಿದ್ದೀರಲ್ಲವೇ? ಈ ಬ್ರಾಹ್ಮಣ ಜನ್ಮದ ವಿಶೇಷ ವೃತ್ತಿ ಏನಾಗಿದೆ? ತಮ್ಮ ವೃತ್ತಿಯಿಂದ, ವಾಣಿಯಿಂದ, ಹಾಗೂ ಕರ್ಮದಿಂದ ವಿಶ್ವ ಪರಿವರ್ತನೆ ಮಾಡಿ. ಹಾಗಾದರೆ ಎಲ್ಲರೂ ಇಂತಹ ಸೇವೆ ಮಾಡುತ್ತೀರಾ? ಅಥವಾ ಸಮಯ ಸಿಗುವುದಿಲ್ಲವೊ ವಾಣಿಗಾಗಿ ಸಮಯವಿಲ್ಲದಿದ್ದರೆ ವೃತ್ತಿಯಿಂದ, ಮನಸಿನ ಸೇವೆಯಿಂದ, ಪರಿವರ್ತನೆ ಮಾಡುವ ಸಮಯವಂತೂ ಇದೆಯಲ್ಲವೇ. ಸೇವಾಧಾರಿ ಆತ್ಮಗಳು ಸೇವೆಯಿಲ್ಲದೇ ಇರಲು ಸಾಧ್ಯವಿಲ್ಲ. ಬ್ರಾಹ್ಮಣ ಜೀವನ ಇರುವುದೇ ಸೇವೆಗಾಗಿ ಹಾಗೂ ಎಷ್ಟು ಬಿಜಿû ಇರುತ್ತೀರೋ ಅಷ್ಟೇ ಸಹಜ ಮಾಯಾಜೀತರಾಗುವಿರಿ ಹಾಗಾದರೆ ಸೇವೆಯ ಫಲವೂ ಸಿಗುತ್ತದೆ ಹಾಗೂ ಮಾಯಾಜೀತರು ಸಹಜವಾಗಿ ಆಗಿ ಬಿಡುವಿರಿ, ಡಬಲ್ ಲಾಭವಾಯಿತಲ್ಲವೇ. ಸ್ವಲ್ಪ ಕೂಡ ಬುದ್ಧಿಗೆ ಬಿಡುವು ಸಿಗುತ್ತದೆ ಎಂದರೆ ಸೇವೆಯಲ್ಲಿ ತೊಡಗಿ ಬಿಡಿ. ಹಾಗೆ ನೋಡಿದರೆ ಪಂಜಾಬ್-ಹರಿಯಾಣದಲ್ಲಿ ಸೇವೆಯ ಭಾವ ಹೆಚ್ಚಿದೆ. ಗುರುದ್ವಾರದಲ್ಲಿ ಹೋಗಿ ಸೇವೆ ಮಾಡುತ್ತೀರಲ್ಲವೇ ಅದಾಗಿದೆ ಸ್ಥೂಲ ಸೇವೆ ಹಾಗೂ ಇದಾಗಿದೆ ಆತ್ಮಿಕ ಸೇವೆ. ಸೇವೆಯ ವಿನಃ ಸಮಯ ಕಳೆಯಬಾರದು. ನಿರಂತರ ಯೋಗಿ, ನಿರಂತರ ಸೇವಾಧಾರಿಯಾಗಿ ಸಂಕಲ್ಪದಿಂದಾದರು ಮಾಡಿ, ವಾಣಿಯಿಂದಾದರು, ಕರ್ಮದಿಂದಾದರು, ತಮ್ಮ ಸಂಪರ್ಕದಿಂದಲೂ ಸಹ ಸೇವೆ ಮಾಡಬಹುದು. ಒಂದು ವೇಳೆ ಮನಸಾ ಸೇವೆ ಮಾಡಲು ಬರವುದಿಲ್ಲವೆಂದರೆ ತಮ್ಮ ಸಂಪರ್ಕದಿಂದ ತಮ್ಮ ಚಲನೆಯಿಂದಲೂ ಸಹ ಸೇವೆ ಮಾಡಬಹುದು. ಇದಂತೂ ಸಹಜವಾಗಿದೆಯಲ್ಲವೇ ಹಾಗಾದರೆ ಚೆಕ್ ಮಾಡಿ. ಸದಾ ಸೇವಾಧಾರಿಯಾಗಿದ್ದೀರಾ ಅಥವಾ ಆಗಾಗ ಸೇವಾಧಾರಿಗಳಾಗುತ್ತೀರೊ? ಒಂದು ವೇಳೆ ಆಗಾಗ ಸೇವಾಧಾರಿಯಾದರೆ ರಾಜ್ಯಭಾಗ್ಯವು ಸಹ ಆಗಾಗ ಸಿಗುವುದು. ಈ ಸಮಯದ ಸೇವೆ ಭವಿಷ್ಯ ಪ್ರಾಪ್ತಿಯ ಆಧಾರವಾಗಿದೆ. ಯಾವಾಗಲೂ ಯಾರೇ ಈ ನೆಪವನ್ನು ಹೇಳಲು ಸಾಧ್ಯವಿಲ್ಲ - ನಾವು ಬಯಸುತ್ತೇವೆ ಆದರೆ ಸಮಯವಿಲ್ಲ. ಕೆಲವರು ಹೇಳುತ್ತಾರೆ ಶರೀರ ನಡೆಯುವುದಿಲ್ಲ, ಕಾಲುಗಳು ನಡೆಯುವುದಿಲ್ಲ, ಏನು ಮಾಡುವುದು. ಇನ್ನು ಕೆಲವರು ಹೇಳುತ್ತಾರೆ ನಮ್ಮ ಸೊಂಟ ನಡೆಯುವುದಿಲ್ಲ. ಕೆಲವರು ಹೇಳುತ್ತಾರೆ ಕಾಲುಗಳು ನಡೆಯುವುದಿಲ್ಲ. ಆದರೆ ಬುದ್ಧಿಯಂತೂ ನಡೆಯುತ್ತದೆಯಲ್ಲವೇ ಹಾಗಾದರೆ ಬುದ್ಧಿಯಿಂದ ಸೇವೆ ಮಾಡಿ. ಆರಾಮವಾಗಿ ಮಂಚದ ಮೇಲೆ ಕುಳಿತು ಸೇವೆ ಮಾಡಿ. ಒಂದುವೇಳೆ ಸೊಂಟ ಡೊಂಕಾಗಿದ್ದರೆ ಮಲಗಿ, ಆದರೆ ಸೇವೆಯಲ್ಲಿ ಬಿಜಿಯಾಗಿರಿ.

ಬಿಜಿಯಾಗಿರುವುದೇ ಸಹಜ ಪುರುಷಾರ್ಥವಾಗಿದೆ- ಪರಿಶ್ರಮ ಪಡಬೇಕಾಗಿಲ್ಲ. ಮತ್ತೆ-ಮತ್ತೆ ಮಾಯೆ ಬರುವುದು ಹಾಗೂ ಅದನ್ನು

ಓಡಿಸುವುದು ಇದು ಪರಿಶ್ರಮದ ಮಾತಾಗಿದೆ. ಯುದ್ಧ ನಡೆಯುತ್ತದೆ. ಬಿಜಿûಯಾಗಿದ್ದವರು ಯುದ್ಧದಿಂದ ಬಚಾವ್ ಆಗುತ್ತಾರೆ. ಬಿಜಿಯಾಗಿರುತ್ತೀರೆಂದರೆ ಮಾಯೆಗೆ ಬರಲು ಸಾಹಸ ಇರುವುದಿಲ್ಲ. ಹಾಗೂ ಎಷ್ಟೋ ನಿಮ್ಮನ್ನು ಬಿಜಿಯಾಗಿಡುತ್ತಾರೆ ಅಷ್ಟೇ ನಿಮ್ಮ ವೃತ್ತಿಯಿಂದ ಪರಿವರ್ತನೆಯಾಗುತ್ತಾ ಹೋಗುತ್ತದೆ. ಯಾವುದೇ ಬ್ರಾಹ್ಮಣ ಆತ್ಮ ಇದನ್ನು ಯೋಚಿಸುವುದಿಲ್ಲ - ಏನು ಮಾಡುವುದು, ವಾಯುಮಂಡಲ ಬಹಳ ಕೆಟ್ಟದಾಗಿದೆ. ಕೆಟ್ಟದಾಗಿದೆ ಆದ್ದರಿಂದಲೇ ಪರಿವರ್ತನೆ ಮಾಡಬೇಕಾಗಿದೆ. ಕೆಟ್ಟದಾಗಿಲ್ಲದಿದ್ದರೆ ಏನು ಮಾಡುತ್ತಿದ್ದಿರಿ? ಒಳ್ಳೆಯದನ್ನು ಪರಿವರ್ತನೆ ಮಾಡುವಿರಾ? ಹಾಗಾದರೆ ವಿಶ್ವ ಪರಿವರ್ತಕರ ಕೆಲಸವಾಗಿದೆ. ಕೆಟ್ಟದ್ದನ್ನು ಒಳ್ಳೆಯದರಲ್ಲಿ ಬದಲಾವಣೆ ಮಾಡುವುದು ಎಂದ ಮೇಲೆ ಕೆಟ್ಟದ್ದಂತೂ ಇದ್ದೇ ಇರುತ್ತದೆ. ಆ ಕೆಟ್ಟದ್ದನ್ನು ಒಳ್ಳೆಯದನ್ನಾಗಿ ಮಾಡುವವರು ನೀವಾಗಿದ್ದೀರಿ! ವಿಶ್ವ ಪರಿವರ್ತನೀಯ ಕಾರ್ಯ ಮಾಡಿದ್ದೀರಲ್ಲವೇ, ಆದ್ದರಿಂದಲೇ ನಿಮ್ಮ ಗಾಯನ ಇಂದಿನವರೆಗೂ ಇದೆ. ಶಕ್ತಿಯರ ಗಾಯನದಲ್ಲಿ ನಿಮ್ಮ ಮಹಿಮೆ ಎಷ್ಟು ಮಾಡುತ್ತಾರೆ! ಹಾಗಾದರೆ ನಿಮ್ಮ ಮಹಿಮೆ ಕೇಳುತ್ತಾ ಖುಷಿಯಾಗುತ್ತದೆಯಲ್ಲವೇ! ಒಳ್ಳೆಯದು.

ವರದಾನ: ವರದಾನ:-ಸೇವೆಯ ಪ್ರತ್ಯಕ್ಷ ಫಲವನ್ನು ತಿನ್ನುತ್ತಾ ಎವರ್ ಹೆಲ್ತಿ, ವೆಲ್ತಿ ಮತ್ತು ಹ್ಯಾಪಿಯಾಗಿರುವಂತಹ ಸದಾ ಸಂತೋಷ ಭವ

ಹೇಗೆ ಸಾಕಾರ ಪ್ರಪಂಚದಲ್ಲಿ ಹೇಳುವಿರಿ ತಾಜಾಫಲವನ್ನು ತಿಂದಾಗ ಆರೋಗ್ಯವಾಗಿರುವಿರಿ. ಆರೋಗ್ಯವಾಗಿರುವ ಸಾಧನೆಯ ಫಲ ತಿಳಿಸುವುದು ಮತ್ತು ನೀವು ಮಕ್ಕಳಂತು ಪ್ರತಿ ಸೆಕೆಂಡ್ ಪ್ರತ್ಯಕ್ಷ ಫಲ ತಿನ್ನುವಂತಹವರು ಆದ್ದರಿಂದ ಒಂದುವೇಳೆ ಯಾರಾದರೂ ನಿಮ್ಮನ್ನು ನಿಮ್ಮ ಯೋಗಕ್ಷೇಮ (ಹಾಲ್-ಚಾಲ್)ಹೇಗಿದೆ? ಎಂದು ಕೇಳಿದರೆ ಹೇಳಿ ಹಾಲ್ ಖುಷ್ ಹಾಲ್(ಸಂತೋಷ) ಆಗಿರುವೆ ಮತ್ತು ಚಾಲ್ (ನಡೆ) ಫರಿಶ್ತೆಗಳ ನಡೆ, ನಾವು ಆರೋಗ್ಯವಂತರೂ ಆಗಿದ್ದೇವೆ, ಐಷ್ವರ್ಯವಂತರೂ ಆಗಿದ್ದೇವೆ ಹಾಗೆ ಹ್ಯಾಪಿಯೂ ಆಗಿದ್ದೇವೆ. ಬ್ರಾಹ್ಮಣರು ಎಂದೂ ಉದಾಸರಾಗಲು ಸಾಧ್ಯವಿಲ್ಲ.

ಸ್ಲೋಗನ್: ಸ್ಲೋಗನ್:-ಪವಿತ್ರ ಆತ್ಮವೇ ಸ್ವಚ್ಚತೆ ಸತ್ಯತೆಯ ಧರ್ಪಣವಾಗಿದೆ.